
# ಇರುವೆಗಳು ಮತ್ತು ಆಗಂತುಕ

ಚಿತ್ರ-ಕಥೆಗಳ ಮೂಲಕ ಮಕ್ಕಳ ಮನೋಜಗತ್ತನ್ನು ಹಿಗ್ಗಲಿಸುವ ಮಹತ್ವಾಕಾಂಕ್ಷೆಯ ಪ್ರಯತ್ನದಲ್ಲಿ ತೊಡಗಿರುವ ಅನುಪಮಾ ಕೆ. ಬೆಣಚಿನಮರ್ಡಿ ಅವರ ಹೊಸ ಕೃತಿ 'ಇರುವೆಗಳು ಮತ್ತು ಆಗಂತುಕ'. ಈಗಾಗಲೇ 'ಕೊಂಚಿಗೆಯ ಸಾಹಸ', 'ಪತ್ತೇದಾರ ಪ್ರಣವ', 'ಕನ್ನಡ ವರ್ಣಮಾಲೆ' ಕೃತಿಗಳನ್ನು 'ಅವ್ವ ಪುಸ್ತಕ' ಪ್ರಕಾಶನದಿಂದ ಪ್ರಕಟಿಸಿರುವ ಅನುಪಮಾ, ಈಗ ಇರುವೆಗಳ ಲೋಕದ ಮೂಲಕ ಕಿರಿಯರ ಜಗತ್ತಿನ ಕದವನ್ನು ಮತ್ತೆ ತಟ್ಟಿದ್ದಾರೆ.




ಇರುವೆಗಳ ಬದುಕಿನ ಕುರಿತ ಸ್ವಾರಸ್ಯಕರ ಸಂಗತಿಗಳನ್ನು ಮಕ್ಕಳಿಗೆ ಪರಿಚಯಿಸುವ ಈ ಕೃತಿ ಎಳೆಯರಿಗೆ ಮಾತ್ರವಲ್ಲ, ಹಿರಿಯರಿಗೂ ಮುದ ನೀಡುವಷ್ಟು ಸುಂದರವಾಗಿ ರೂಪುಗೊಂಡಿದೆ. ಅನುಪಮಾ ಅವರ ಕಥೆಯೊಂದಿಗೆ ಶೈಲಜಾ ಎಸ್. ಅವರು ತಮ್ಮ ಚಿತ್ರಗಳ ಮೂಲಕ ನಡೆಸಿರುವ ಜುಗಲಬಂದಿ ಆಕರ್ಷಕವಾಗಿದೆ. ಇರುವೆಗಳಂಥ ಪುಟ್ಟ ಜೀವಿಗಳ ಬದುಕು ಕಾಣಿಸುವ ದೊಡ್ಡ ದರ್ಶನ ಮಕ್ಕಳಿಗೆ ಭಾರವೆನ್ನಿಸದಂತೆ ಮೂಡಿಬಂದಿದೆ.

ರಾಣಿ ಗೂಡಿನಲ್ಲಿರುವುದು, ಕಾರ್ಮಿಕರು ಆಹಾರ ಹುಡುಕಿ ತರುವುದು ಇರುವೆ ಪ್ರಪಂಚದ ಸಹಜ ರಿವಾಜು. ಈ ರೂಢಿಗೆ ಅನುಗುಣವಾಗಿ ಕಿಟ್ಟಿ, ಚಿಟ್ಟಿ, ಟಿಟ್ಟಿ, ತಿಟ್ಟಿ, ಪಿಟ್ಟಿ ಸೇರಿದಂತೆ ಇರುವೆಗಳ ಗುಂಪು ಆಹಾರ ಹುಡುಕಿಕೊಂಡು ಹೊರಡುತ್ತವೆ. ಈ ಪಯಣದಲ್ಲಿ ಆಗಂತುಕನೊಬ್ಬ ಅವರ ಜೊತೆ ಸೇರಿಕೊಳ್ಳುತ್ತಾನೆ. ನೋಡಲಿಕ್ಕೆ ತಮ್ಮಂತೆಯೇ ಕಾಣುವ ಆ ಆಗಂತುಕನಿಂದಾಗಿ ಇರುವೆ ಗುಂಪಿನಲ್ಲಿ ಆತಂಕ ಉಂಟಾಗುತ್ತದೆ. ವಿಚಾರಣೆ ನಡೆಸುವ ರಾಣಿ, ಗುಂಪಿನಿಂದ ದೂರ ಹೋಗುವಂತೆ ಆಗಂತುಕನಿಗೆ ಆದೇಶ ಹೊರಡಿಸುತ್ತದೆ. ಆ ಆಗಂತುಕ ಗೂಡಿನಿಂದ ಹೊರಗೆ ಹೊರಡುವ ಸಂದರ್ಭದಲ್ಲಿ ಇರುವೆ ಗೂಡಿಗೆ ಅನಿರೀಕ್ಷಿತ ಆಘಾತ ಎದುರಾಗುತ್ತದೆ. ಏನು ಆ ಆಘಾತ? ಆ ಸಂದರ್ಭದಲ್ಲಿ ಇರುವೆಗಳ ನೆರವಿಗೆ ಆಗಂತುಕ ಯಾವ ರೀತಿಯಲ್ಲಿ ಒದಗಿಬರುತ್ತಾನೆ? ಈ ಪ್ರಶ್ನೆಗಳಿಗೆ ಉತ್ತರವೇ ಕಥನದ ಸ್ವಾರಸ್ಯ.

ಇರುವೆಗಳ ಕುರಿತ ಮಾಹಿತಿಯ ಟಿಪ್ಪಣಿಗಳ ನಿರೂಪಣೆಯಂತೆ ಕಾಣಿಸುವ ಕೃತಿ, ಇದ್ದಕ್ಕಿದ್ದಂತೆ ಸಹಬಾಳ್ವೆಯ ಅಗತ್ಯವನ್ನು ಮನವರಿಕೆ ಮಾಡಿಕೊಡುವುದರೊಂದಿಗೆ ಕುತೂಹಲಕರ ಆಯಾಮ ಪಡೆದುಕೊಳ್ಳುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಮಕ್ಕಳಿಗೆ ಕನ್ನಡದಲ್ಲಿಯೇ ವರ್ಣರಂಜಿತ ಪುಟಗಳ ಪುಸ್ತಕಗಳು ದೊರೆಯುತ್ತಿವೆ. ಈ ನಿಟ್ಟನಲ್ಲಿ ಅನುಪಮಾ ಅವರ 'ಅವ್ವ ಪುಸ್ತಕ' ಪ್ರಕಾಶನದ ಪಾಲೂ ಇದೆ. ಅನುಪಮಾ ಅವರು ಪ್ರಕಟಿಸಿರುವುದು ಬೆರಳೆಣಿಕೆಯ ಪುಸ್ತಕಗಳಾದರೂ, ಆ ಪುಸ್ತಕಗಳ ಹಿಂದಿನ ತಾತ್ವಿಕತೆ ಹಾಗೂ ಬದ್ಧತೆ ಗಮನಸೆಳೆಯುವಂತಿದೆ. ತಮ್ಮ ಕಥೆಗೆ ಹೊಂದುವ ರೀತಿಯ ಚಿತ್ರಗಳನ್ನು ರಚಿಸುವ ಕಲಾವಿದರಿಗಾಗಿ ಅವರು ನಡೆಸಿರುವ ಹುಡುಕಾಟ ಪುಸ್ತಕಗಳಲ್ಲಿ ಕಾಣಿಸುವಂತಿದೆ. 'ಇರುವೆಗಳು ಮತ್ತು ಆಗಂತುಕ' ಕೃತಿಯೂ ಸೇರಿದಂತೆ ಅನುಪಮಾ ಅವರ ಎಲ್ಲ ಕೃತಿಗಳು ಮಕ್ಕಳಿಗೆ ಕಥೆಯನ್ನು ಮಾತ್ರ ದಾಟಿಸುತ್ತಿಲ್ಲ, ಕನ್ನಡ ಪರಿಸರ-ಸಂಸ್ಕೃತಿಯ ಪರಿಚಯವನ್ನೂ ಮಾಡಿಕೊಡುತ್ತಿವೆ.

●

**ಇರುವೆಗಳು ಮತ್ತು ಆಗಂತುಕ** ಲೇ: ಅನುಪಮಾ ಕೆ. ಬೆಣಚಿನಮರ್ಡಿ
ಪು: 28; ಬೆ: 175 ಪ್ರ: ಅವ್ವ ಪುಸ್ತಕ, ಬೆಂಗಳೂರು. ಫೋನ್: 9739266465